ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಸೋಮವಾರ, ೨೪, ಆಗಸ್ಟ್, ೨೦೨೬ (ಭಾದ್ರಪದ, ೦೨, ಶಕವರ್ಷ, ೧೯೪೮) BENGALURU, MONDAY, 24, AUGUST, 2026 (BHADRAPADA , 02, SHAKAVARSHA, 1948)	ಸಂ. ೭೬೯ No.769

ಕರ್ನಾಟಕ ವಿಧಾನಸಭೆ

ಹದಿನಾರನೇ ವಿಧಾನಸಭೆ

ಹತ್ತನೇ ಅಧಿವೇಶನ

ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026

(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–27)

ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ 06)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. ಪ್ರಕರಣ 19ರ ತಿದ್ದುಪಡಿ.- ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ 06)ರ 19ನೇ ಪ್ರಕರಣದ, (4)ನೇ ಉಪ-ಪ್ರಕರಣ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,-

"(5) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ 06)ರ ಪ್ರಾರಂಭದ

ದಿನಾಂಕದಿಂದ ಪ್ರಾರಂಭಗೊಂಡು ಮತ್ತು ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ನಿಯಮಗಳು, 2026ರ ಅಧಿಸೂಚನೆಯ ದಿನಾಂಕದವರೆಗೆ ಮುಕ್ತಾಯಗೊಳ್ಳುವ ನಿಕಟಪೂರ್ವ ಅವಧಿಯಲ್ಲಿ ಆರಂಭಗೊಂಡ ಪ್ರಾಜೆಕ್ಟುಗಳ ಸಂದರ್ಭದಲ್ಲಿ, ಅಂಥ ಪ್ರಾಜೆಕ್ಟುಗಳಿಗೆ ಸಂಬಂಧಿಸಿದಂತೆ ಕೈಗೊಂಡ ಎಲ್ಲಾ ನಿರ್ಧಾರಗಳು, ಸಿದ್ಧಪಡಿಸಿದ ಯೋಜನೆಗಳು, ಕೈಗೊಂಡ ಕಾರ್ಯಾಚರಣೆಗಳು ಮತ್ತು ಬಾಕಿ ಇರುವ ವ್ಯವಹರಣೆಗಳನ್ನು ಈ ಅಧಿನಿಯಮದ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ, ಸಿದ್ಧಪಡಿಸಲಾಗಿದೆ, ಕೈಗೊಳ್ಳಲಾಗಿದೆ ಅಥವಾ ಸಂದರ್ಭಾನುಸಾರ ಆರಂಭಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆಯನ್ನು ನಿವಾರಿಸಲು ತಕ್ಷಣದ ಮತ್ತು ತುರ್ತು ಅಗತ್ಯವಿರುವ ಹಿನ್ನೆಲೆಯಲ್ಲಿ ಹಾಗೂ ಏರುತ್ತಿರುವ ಸಂಚಾರಿ ದಟ್ಟಣೆಯ ಸವಾಲುಗಳನ್ನು ಪರಿಹರಿಸಲು ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ 06)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಡಿ. ಕೆ. ಶಿವಕುಮಾರ್
ಮುಖ್ಯ ಮಂತ್ರಿ

ಎಂ.ಕೆ. ವಿಶಾಲಾಕ್ಷಿ
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ವಿಧೇಯಕ, 2022

(2023ರ ಕರ್ನಾಟಕ ಅಧಿನಿಯಮ 06)ರ ಉದ್ಧೃತ ಭಾಗ.

XXX XXX XXX

19. ಪ್ರಮುಖ ನಗರ ಸಾರಿಗೆ ಯೋಜನೆಗಳನ್ನು ಅನುಮೋದಿಸುವ ಅಧಿಕಾರ.- (1) ಪ್ರಾಧಿಕಾರವು, ಸಮಗ್ರ ಸಂಚಾರ ಯೋಜನೆಯ ಸುಸ್ಥಿರತೆಗಾಗಿ ಮತ್ತು ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಕಾಲಬದ್ಧ ವಿಧಾನದಲ್ಲಿ ನಗರ ಸಾರಿಗೆ ಏಜೆನ್ಸಿಗಳು, ಮೂಲಸೌಕರ್ಯ ಅಭಿವೃದ್ಧಿ ಏಜೆನ್ಸಿಗಳು ಮತ್ತು ಸಂಚಾರ ನಿರ್ವಹಣಾ ಏಜೆನ್ಸಿಗಳು ಅಥವಾ ರಾಜ್ಯ ಸರ್ಕಾರದ ಅಡಿಯಲ್ಲಿನ ಯಾವುದೇ ಇತರೆ ಏಜೆನ್ಸಿಗಳು ಅಥವಾ ಯಾವುದೇ ಸ್ಥಳೀಯ ಸರ್ಕಾರಿ ಏಜೆನ್ಸಿ ಇವುಗಳ ಮೂಲಕ ನಗರ ಸಂಚಾರ ಪ್ರದೇಶ ಅಥವಾ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿದ ಎಲ್ಲ ಪ್ರಮುಖ ನಗರ ಸಾರಿಗೆ ಯೋಜನೆಗಳನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ರಾಜ್ಯ ಸರ್ಕಾರದ ಅಡಿಯಲ್ಲಿನ ಯಾವುದೇ ಪ್ರಾಧಿಕಾರ, ಏಜೆನ್ಸಿ, ಇಲಾಖೆಯು, ಪ್ರಾಧಿಕಾರದ ಪೂರ್ವಾನುಮೋದನೆಯನ್ನು ಪಡೆಯದೆ ಸಂಬಂಧಿಸಿದ ನಗರ ಸಂಚಾರದ ಯಾವುದೇ ಸಾರ್ವಜನಿಕ, ಖಾಸಗಿ, ಅಥವಾ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಯೋಜನೆಯನ್ನು ಪ್ರಾರಂಭಿಸತಕ್ಕದ್ದಲ್ಲ. ನಿಯತ ಆಯವ್ಯಯ ಹಂಚಿಕೆಗಳು, ಯಾವುದೇ ಬಾಹ್ಯ ಸಹಾಯ ನಿಧಿಯನ್ನು ಹಾಗೂ ಕೇಂದ್ರ ಸರ್ಕಾರದ ಪ್ರಾಯೋಜಿತ ನಿಧಿಯೂ ಸೇರಿದಂತೆ, ರಾಜ್ಯ ಸರ್ಕಾರದಿಂದ ಯಾವುದೇ ಹಣಕಾಸಿನ ನೆರವನ್ನು ಕೋರುವುದಕ್ಕೆ ಪ್ರಾಧಿಕಾರದ ಅನುಮೋದನೆ ಪಡೆಯುವುದು ಅಗತ್ಯವಾಗಿರತಕ್ಕದ್ದು.

(3) ಯಾವುದೇ ಯೋಜನೆಯ ಅನುಮೋದನೆಗಾಗಿ (1)ನೇ ಉಪ-ಪ್ರಕರಣದ ಮೇರೆಗೆ ಕೋರಿಕೆಯನ್ನು ಸ್ವೀಕರಿಸಿದ ತರುವಾಯ, ಪ್ರಾಧಿಕಾರವು, ವಿನಿಯಮಗಳಲ್ಲಿ ಅಗತ್ಯಪಡಿಸಿದಂಥ ವಿಚಾರಣೆಯನ್ನು ಕೈಗೊಳ್ಳತಕ್ಕದ್ದು ಮತ್ತು ನಿರ್ದಿಷ್ಟಪಡಿಸಿದಂಥ ಕೋರಿಕೆಗೆ ಮಂಜೂರಾತಿಯನ್ನು ನೀಡಬಹುದು ಅಥವಾ ನಿರಾಕರಿಸಬಹುದು:

ಪರಂತು, ಪ್ರಾಧಿಕಾರವು ಕೋರಿಕೆಗೆ ಅನುಮೋದನೆಯನ್ನು ನೀಡುವಾಗ ಕೆಲವು ಷರತ್ತುಗಳನ್ನು ವಿಧಿಸುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರಿಯು (3)ನೇ ಉಪ-ಪ್ರಕರಣದ ಮೇರೆಗೆ ನೀಡಿದ ನಿರ್ಣಯಕ್ಕೆ ತದ್ವಿರುದ್ಧವಾಗಿ ಯಾವುದೇ ಕಾರ್ಯವನ್ನು ಕೈಗೊಂಡ ಸಂದರ್ಭದಲ್ಲಿ ಅಥವಾ ಇದಕ್ಕೆ ಪ್ರಾಧಿಕಾರದ ಅನುಮೋದನೆಯು ಇಲ್ಲದಿರುವಲ್ಲಿ, ಪ್ರಾಧಿಕಾರವು, ಅಂಥ ನಿರ್ಣಯ ಅಥವಾ ಅನುಮೋದನೆಗೆ ತದ್ವಿರುದ್ಧವಾಗಿ ಕೈಗೊಂಡ ಯಾವುದೇ ಅಭಿವೃದ್ಧಿ ಕಾರ್ಯವನ್ನು ಕೆಡವಲು, ನೆಲಸಮಗೊಳಿಸಲು ಅಥವಾ ತೆಗೆದುಹಾಕಲು ಅಂಥ ಏಜೆನ್ಸಿಗಳಿಗೆ ನಿರ್ದೇಶಿಸತಕ್ಕದ್ದು ಮತ್ತು ಅಂಥ ಏಜೆನ್ಸಿಗಳು, ಸಂಬಂಧಪಟ್ಟ ವ್ಯಕ್ತಿಯಿಂದ ಅಥವಾ ಪ್ರಾಧಿಕಾರಿಯಿಂದ ಅಂಥ ಕೆಡವುವಿಕೆ, ನೆಲಸಮಗೊಳಿಸುವಿಕೆ ಅಥವಾ ತೆಗೆದುಹಾಕುವಿಕೆಗೆ ತಗುಲಿದ ಖರ್ಚನ್ನು ವಸೂಲಿ ಮಾಡತಕ್ಕದ್ದು.

XXX XXX XXX

KARNATAKA LEGISLATIVE ASSEMBLY

SIXTEENTH LEGISLATIVE ASSEMBLY

TENTH SESSION

THE BENGALURU METROPOLITAN LAND TRANSPORT AUTHORITY (AMENDMENT) BILL, 2026
(LA Bill No. 27 of 2026)

A Bill further to amend the Bengaluru Metropolitan Land Transport Authority Act, 2022.

Whereas it is expedient further to amend the Bengaluru Metropolitan Land Transport Authority Act, 2022 (Karnataka Act 06 of 2023) for the purpose hereinafter appearing:

Be it enacted by the Karnataka State Legislature in the seventy seventh year of the Republic of India, as follows:-

1. Short title and commencement.- (1) This Act may be called the Bengaluru Metropolitan Land Transport Authority (Amendment) Act, 2026.

(2) It shall come into force at once.

2. Amendment of section 19.- In the Bengaluru Metropolitan Land Transport Authority Act, 2022 (Karnataka Act 06 of 2023) in section 19, after sub-section (4) the following shall be inserted, namely;-

“(5) Notwithstanding anything contained in this Act, in case of all projects initiated during the period commencing from the date of commencement of the Bengaluru Metropolitan Land Transport Authority Act, 2022 (Karnataka Act 06 of 2023) and ending immediately before the date of notification of the Bengaluru Metropolitan Land Transport Authority Rules, 2026, all the decisions taken, plans prepared, operations undertaken and proceedings pending in relation to such projects shall be deemed to have been taken, prepared, undertaken or instituted, as the case may be, under this Act.”

STATEMENT OF OBJECTS AND REASONS

It is considered necessary further to amend the Bengaluru Metropolitan Land Transport Authority Act, 2022 (Karnataka Act 06 of 2023) to ensure continuity in administrative decision making in view of the imminent and pressing need to decongest traffic and address the mounting mobility challenges in Bengaluru.

Hence, the Bill.

FINANCIAL MEMORANDUM

There is no extra expenditure involved in the proposed legislative measure at this stage.

D. K. SHIVAKUMAR
CHIEF MINISTER

M.K. VISHALAKSHI
Secretary
Karnataka Legislative Assembly

ANNEXURE

EXTRACT FROM THE BENGALURU METROPOLITAN LAND TRANSPORT AUTHORITY ACT, 2022 (KARNATAKA ACT 06 OF 2023)

XX XX XX

19. Power to approve major Urban Transport projects.- (1) The Authority shall have power to approve all major Urban Transport projects proposed for or in the Urban Mobility Region to be developed by the Urban Transport Agencies, Infrastructure Development Agencies and Traffic Management Agencies or any other agencies under the State Government or any local Government agency, from the perspective of consistency with the Comprehensive Mobility Plan and in a time bound manner as specified in the regulations.

(2) No authority, agency, department under the State Government shall initiate any public, private or public-private partnership project concerning Urban Mobility without obtaining prior approval of the Authority. The Approval of the

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

Authority shall be necessary to seek any financial assistance from the State Government including the regular budgetary allocations, any external aided funding as well as the Central Government sponsored funding.

(3) Upon receipt of request under sub-section (1) for approval of any project, the Authority shall undertake such inquiry as required and may grant or reject such request as specified under regulations: Provided that, the Authority shall have the power to issue certain conditions while granting approval to a request.

(4) In case any person or authority does anything contrary to the decision given under sub-section (3) or in the absence of the approval of the Authority, the Authority shall direct such agencies to pull down, demolish or remove any development undertaken contrary to such decision or approval and such agencies shall recover the cost of such pulling down, demolition or removal from the person or the authority concerned.

XX XX XX

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU